ರಾಜ್ಯದಲ್ಲಿ ಪ್ರತಿ ವರ್ಷವೂ ಪಂಪುಸೆಟ್ಟುಗಳಿಗೆ ವಿದ್ಯುತ್‌ಗಾಗಿ ನೊಂದಾಯಿಸಲ್ಪಡುವ ಅರ್ಜಿಗಳ ಸಂಖ್ಯೆ ವಾರ್ಷಿಕ ಗುರಿಯ ೧.೫ ಪಟ್ಟಿನಷ್ಟು ಆಗಿರುವುದರಿಂದ ಹಲವಾರು ಪ್ರಕರಣಗಳಲ್ಲಿ ವಿಳಂಬ ಆಗಿವಾರ್ಕ. ವಾರ್ಷಿಕ ಗುರಿಯನ್ನು ಲಭ್ಯವಿರುವ ಹಣಕ್ಕನುಗುಣವಾಗಿ ನಿರ್ಧರಿಸಿ ಗುರಿಗೆ ಅನುಗುಣವಾಗಿ ಸಾಮಗ್ರಿಗಳ ಸರಬರಾಜು ಆಗುತ್ತಿದೆ. ಹೀಗೆ ಗುರಿ ಮೀರಿ ಪ್ರಗತಿ ಸಾಧಿಸುತ್ತಿದ್ದರೂ ಕುಂದಾಪುರ ತಾಲೂಕಿನಲ್ಲಿ ಸಾಮಾರು ೩೦ ಯೋಜನೆಗಳ ಪಂಪು ಸೆಟ್ಟುಗಳ ಕೆಲಸ ಹಾಲಿ ಬಾಕಿ ಉಳಿದಿದೆ. ಪಂಪುಸೆಟ್ಟಿನ ಕೆಲಸವನ್ನು ಆದ್ಯತೆ ಸೂತ್ರಕ್ಕೆ ಅನುಗುಣವಾಗಿ ಮಾಡಲಾಗುತ್ತಿದೆ.

೧೧) ಕರಾವಳಿ ಪ್ರದೇಶಗಳಲ್ಲಿ ಸಮುದ್ರ ಕೊರೆತವನ್ನು ತಪ್ಪಿಸಲು ತಡೆ ಗೆದೇಡೆಗಳನ್ನು ನಿರ್ಮಿಸುವ ಬಗ್ಗೆ

ಶ್ರೀ ಬಸಪರಾಜ್ (ಬ್ರಹ್ಮಾವರ) —ಮಾನ್ಯ ಅಧ್ಯಕ್ಷರೆ, ಮಳೆಗಾಲ ಬರುತ್ತಿದೆ, ಕಡಲಕಿನಾರೆಯಲ್ಲಿ ಬಿರುಗಾಳಿ ಬೀಸುತ್ತಿದೆ. ಸಮುದ್ರ ತೀರದಲ್ಲಿ ವಾಸಿಸುವ ಜನರ ಬದುಕಿನಲ್ಲಿ ಬಿರುಗಾಳಿ ಬೀಸುವ ಆಂಜಿಕೆ ಪ್ರಾರಂಭವಾಗಿದೆ, ಕಾರಣ, ಕಡಲ ಕೊರೆತದ ಭೀತಿ. ಕರಾವಳಿಯುದ್ದಕ್ಕೂ ಪ್ರತಿ ವರ್ಷ ಕಡಲ ಕೊರೆತ. ಮನೆ, ಭೂಮಿ ಸಮುದ್ರ ಪಾಲು. ತೆಂಗು ಇತ್ಯಾದಿ ಫಲವೃಕ್ಷಗಳು ಅಡಿ ಮೇಲಾಗಿ. ಇದನ್ನು ತಪ್ಪಿಸಲು ಕೇಂದ್ರ ಸರಕಾರದ ನೆರವು ಪಡೆದು ತಡೆಗೋಡೆಯನ್ನು ಕೇರಳ ಮಾದರಿಯಲ್ಲಿ ನಿರ್ಮಿಸಿ ಎಂದು ಕರಾವಳಿಯ ಶಾಸಕರು ಒತ್ತಾಯಿಸುತ್ತಿದ್ದರೂ, ಶಾಸ್ವತ ಪರಿಹಾರಕ್ಕಾಗಿ ಸರಕಾರದ ಕಣ್ಣು ತೆರೆದಿಲ್ಲ. ತಾತ್ಕಾಲಿಕ ರಕ್ಷಣ ವ್ಯವಸ್ಥೆ ಮಾತ್ರ ಆಗುತ್ತಿದೆ. ಉಡುಪಿ ತಾಲ್ಲೂಕಿನ ಹೂಡೆಯಿಂದ ಕೋಡೆ ಬೆಂಗರೆ ತನಕ ಳ ಕಿಲೋಮಿಾಟರಿಗೆ ಕೊರೆತದ ಹಾನಿ ತಟ್ಟಿದಾಗ ಬರೇ ೧೦೦ ಅಡಿ ಉದ್ದಕ್ಕೆ ಹಿಂದೆ ರಕ್ಷಣ ಕೆಲಸ ಮಾಡಲಾಯಿತು. ಯಾವ ಆಸಕ್ತ ಜನರಿಗೆ ಈ ರಕ್ಷಣೆ ? ಉಳಿದ ಬಡವರನ್ನು ಯಾರೂ ಕೇಳುವವರಿಲ್ಲವೆ ಎಂದು ಜನ ಮೊರೆಯಿಡುತ್ತಿದ್ದಾರೆ. ಅವರ ರೋದನ ಸಮುದ್ರದ ಅಲೆಗಳ ಅಬ್ಬರದ ನಡುವೆ ಸ್ತಬ್ದವಾದರೆ ಪರಿಸ್ಥಿತಿ ಶೋಚನೀಯವಾದೀತು. ಸೂಕ್ತ ಕ್ರಮಕ್ಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರ ರೋದನವನ್ನು ಸಮುದ್ರದ ಅಲೆಗಳಿಗೆ ಹೋಲಿಸಬೇಕಾಗಿಲ್ಲ. ಉತ್ತರ ತರಿಸಿಕೊಡುತ್ತೇನೆ.

೧೨) ಕೆ.ಎಸ್.ಎಫ್.ಸಿ.ಯಂವರು ಸಣ್ಣ ಸಣ್ಣ ಉದ್ದಿಮೆಗಳ ಸಾಲ ವಸೂಲಿ ಮಾಡುವಾಗ ಲಿಲಾವು ಮಾಡುತ್ತಿರುವುದರ ಬಗ್ಗೆ

ಶ್ರೀ ಕೆ. ಎಚ್. ಪಾಟೀಲ್ (ಗದಗ).— ಕರ್ನಾಟಕ ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್‌ನವರು ಸಣ್ಣ ಸಣ್ಣ ಉದ್ದಿಮೆಗಳ ಸಾಲ ವಸೂಲಿ ಬಗ್ಗೆ ಉದ್ದಿಮೆ ಲಿಲಾವು ಮಾಡುವ ಕೊನೆಯಂ ಕ್ರಮ ಕೈಕೊಳ್ಳುತ್ತಿದ್ದು ಇದರಿಂದ ಅನೇಕ ಪ್ರಾಮಾಣಿಕ ಉದ್ದಿಮೆದಾರರಿಗೆ ತೊಂದರೆಯಾಗಿದೆ. ಆದರೆ ಅದೇ ಸಂಸ್ಥೆಯ ಈಗಿನ ವ್ಯವಸ್ಥಾಪಕರು ದೊಡ್ಡ ದೊಡ್ಡ ಉದ್ದಿಮೆದಾರರಂ ಒಹ.ದೊಡ್ಡ ಬಾಕಿದಾರರಿಗೂ ಸಹ ಅವರ ಉದ್ದಿಮೆಯನ್ನು ಲಾಲವ್ ಮಾಡಲಾದವರಾಗಿದ್ದಾರೆ. ಈ ಪ್ರಕಾರದ ಪಕ್ಷಪಾತದ ಧೋರಣೆಯು ಒಕಾರಣವೇನಂಬುದನ್ನು ಮಾನ್ಯ ಮಂತ್ರಿವರ್ಯರು ಕಂಡುಹಿಡಿದು ಎಲ್ಲಾ ಸಣ್ಣ ಉದ್ದಿಮೆದಾರರಿಂದ ಸ್ವಲ್ಪ ಹಣ ಕಟ್ಟಿದವರಿಗೆ ಸಮಯ ಕೊಟ್ಟು ಉದ್ದಿಮೆಗಳು ಊರ್ಜಿತಗೊಳಿಸುವಂತೆ ಮಾಡಲು ಆದೇಶ ನೀಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ತರಿಸಿಕೊಡುತ್ತೇನೆ ಸ್ವಾಮಿ.

ಶ್ರೀ ಕೆ. ಎಚ್. ಪಾಟೀಲ್.—ಇದಕ್ಕೂ ಉತ್ತರ ತರಿಸಿಕೊಡಬೇಕಾ ?